

ಜೂನಿಯರ್ ಕಟ್ಟೆಯ ಬಳಿ ಕಾಮೇಗೌಡರ ಕಾಯಕ

ಕೆಲವರು ಈ ಗೌಡ ಏನೋ ಮಾಡಬಾರದ್ದನ್ನು ಮಾಡುತ್ತಿದ್ದಾನೆಂದು ಅರಣ್ಯಾಧಿಕಾರಿಗಳಿಗೆ ದೂರು ಕೊಟ್ಟಿದ್ದರು. ಅಧಿಕಾರಿಗಳು ಒಂದು ಗುಂಡಿ ತೋಡದಂತೆ ಎಚ್ಚರಿಕೆ ಕೊಟ್ಟಿದ್ದರು. ಈ ಪ್ರತಿರೋಧಗಳನ್ನೇ ಸವಾಲಾಗಿ ಸ್ವೀಕರಿಸಿದ ಕಾಮೇಗೌಡರು, ಜನರ ಕಣ್ತೆರೆಸುವ ರೀತಿಯ ಒಂದು ಕಟ್ಟೆಯನ್ನಾದರೂ ಕಟ್ಟಲೇಬೇಕು ಎಂದು ಪಣತೊಟ್ಟರು.

‘ಸರ್ಕಾರಿ ಜಾಗವನ್ನು ಕಳ್ಳತನ ಮಾಡುತ್ತಿಲ್ಲ, ಸರ್ಕಾರ ಮಾಡುವ ಕೆಲಸವನ್ನು ನಾನೇ ಮಾಡುತ್ತಿದ್ದೇನೆ’ ಎಂದು ಬೆದರಿಕೆ ಹಾಕಿದವರಿಗೆ ಹೇಳತೊಡಗಿದರು. ಬೆಟ್ಟದ ತಪ್ಪಲಲ್ಲಿ ನೀರು ಸಂಗ್ರಹವಾಗುವ ಪಸಿ ಜಾಗದಲ್ಲಿ ಮೊದಲ ಕಟ್ಟೆಯ ನಿರ್ಮಾಣ ಕಾರ್ಯ ಆರಂಭಿಸಿದರು. ಕೆಲ ದಿನ ತಾವೊಬ್ಬರೇ ಕೆಲಸ ಮಾಡಿದರು. ನಂತರ ಆಳುಗಳೊಂದಿಗೆ ಕೆಲಸ ಮಾಡಿಸಿದರು. ಕೆಲಸಕ್ಕೆ ಬರುತ್ತಿದ್ದ ಆಳುಗಳು ಇವರ ಕೆಲಸದ ಬಗ್ಗೆ ನಗುತ್ತಿದ್ದರು, ಹಂಗಿಸುತ್ತಿದ್ದರು. ಅದಾವುದನ್ನೂ ಲೆಕ್ಕಿಸದೆ ಕಾಮೇಗೌಡರು ಕೆಲಸ ಮುಂದುವರಿಸಿದರು. ಕೆಳಗೆ ಬಂಡೆಗಳು ಸಿಕ್ಕಿದ ಕಾರಣ ಟ್ರ್ಯಾಕ್ಟರ್ ಕರೆಸಿ ಕಟ್ಟೆ ತೋಡಿಸಬೇಕಾಯಿತು.

15 ಅಡಿಗೆ ಕಟ್ಟೆ ಇಳಿಯುತ್ತಿದ್ದಂತೆ ಸುತ್ತಲೂ ಜಲದ ಕಣ್ಣು ತೆರೆಯಿತು. ಒಂದೇ ರಾತ್ರಿಯಲ್ಲಿ ಕಟ್ಟೆಯಲ್ಲಿ ನೀರು ಸಂಗ್ರಹಗೊಂಡು. ಆ ಕಟ್ಟೆಯ ನಂತರ ಸುತ್ತಲೂ ಕಲ್ಲು ಕಟ್ಟಡ ಮಾಡಿಸಿದರು. ಏರಿಯ ಮೇಲೆ ಸಸಿ ನೆಟ್ಟರು. ಅಲ್ಲಿಗೆ ತೆರಳಲು ರಸ್ತೆ ಮಾಡಿಕೊಂಡರು. ಬೇಸಿಗೆ ಬಂದರೂ ಕಟ್ಟೆಯಲ್ಲಿ ನೀರು ಆರಲಿಲ್ಲ. ನೀರು ಸದಾಕಾಲ ಇರುತ್ತಿದ್ದ, ತಮ್ಮ ಚೊಚ್ಚಿಲ ಸಾಹಸದ ಕಟ್ಟೆಯನ್ನು ‘ಅಕ್ಷಯ ಪಾತ್ರೆ’ ಎಂದು ಕರೆದರು.

## ಅಕ್ಷಯನಿಗೊಬ್ಬ ‘ಜೂನಿಯರ್’

ಭಾರೀ ಮಳೆ ಸುರಿದಾಗೊಮ್ಮೆ ‘ಅಕ್ಷಯ ಪಾತ್ರೆ’ ಮುಚ್ಚಿಹೋಗಿತ್ತು. ಪ್ರವಾಹ ಬಂದರೂ ತಡೆಯುವ ಶಕ್ತಿಯನ್ನು ಆ ಕಟ್ಟೆಗೆ ನೀಡಿದರು. ಕಲ್ಲುಗಳಿಂದ ಬಂಧಿಸಿ ಸುತ್ತಲೂ ಹೆಚ್ಚು ಹೆಚ್ಚು ಸಸಿ ನೆಟ್ಟರು. ನಂತರ ಆ ಕಟ್ಟೆ ಅಕ್ಕಪಕ್ಕದ ಗ್ರಾಮಗಳ ಜನರಿಗೆ ಬಟ್ಟೆ ತೊಳೆಯುವ, ಜಾನುವಾರುಗಳಿಗೆ ನೀರು ಕುಡಿಯುವ ತಾಣವಾಯಿತು.

ಮೊದಲ ಕಟ್ಟೆಯಿಂದ ಪ್ರೇರಣೆ ಪಡೆದ ಕಾಮೇಗೌಡರು ಎರಡನೇ ಕಟ್ಟೆ ಕೆಲಸ ಆರಂಭಿಸಿದರು. ಆಗಲೂ ಅವರಿಗೆ ಕೆಲವರಿಂದ ವಿರೋಧ ಎದುರಾಯಿತು. ಎಲ್ಲ ತೊಂದರೆ ಮೀರಿ ಎರಡನೇ ಕಟ್ಟೆ ರೂಪಿಸಿ, ಅದಕ್ಕೂ ಏರಿ ನಿರ್ಮಿಸಿ, ಸಸಿ ನೆಟ್ಟರು. ಆದರೆ ಬೇಸಿಗೆ ಬರುತ್ತಿದ್ದಂತೆ ಹೊಸ ಕಟ್ಟೆಯಲ್ಲಿ ನೀರು ಖಾಲಿಯಾಗುತ್ತಿತ್ತು. ಇದರಿಂದ ಬೇಸರಗೊಂಡ ಕಾಮೇಗೌಡರು, ಇದಕ್ಕೆ ‘ಜೂನಿಯರ್’ ಎಂದು ನಾಮಕರಣ ಮಾಡಿದರು.

## ‘ಕಾಮೇಗೌಡ ಸೇವಕ’

ಜೂನಿಯರ್ ಕಟ್ಟೆ ಹೆಚ್ಚು ಫಲಕಾರಿಯಾಗದ ಬೇಸರ ಮೂರನೇ ಕಟ್ಟೆಯ ನಿರ್ಮಾಣಕ್ಕೆ ಕಾರಣವಾಯಿತು. ‘ಹೊಸ ಕಟ್ಟೆಯಲ್ಲಿ ತೃಪ್ತಿಕರವಾಗಿ ನೀರು ಸಿಕ್ಕಿದರೆ ನಿನ್ನ ಸೇವಕನಾಗಿ ದುಡಿಯುತ್ತೇನೆ’ ಎಂದು ಸಿದ್ಧಪ್ಪಾಜಿಗೆ ಹರಕೆ ಹೊತ್ತು ಕೆಲಸ ಆರಂಭಿಸಿದರು. ಈ ನಡುವೆ ಬೆಟ್ಟದ ಮೇಲೆ ಮರಳು ಕಳ್ಳತನ ಮಾಡಿದ್ದಾರೆ ಎಂಬ ಆರೋಪದ ಮೇಲೆ ಕಾಮೇಗೌಡರ ವಿರುದ್ಧ ಪ್ರಕರಣ ದಾಖಲಾಯಿತು. ಆ ಸಂದರ್ಭದಲ್ಲಿ ಅವರು ಪಟ್ಟ ಕಷ್ಟ ಅಷ್ಟಿಷ್ಟಲ್ಲ. ಆದರೆ ಪೊಲೀಸರು ಕಾಮೇಗೌಡರ ಅಂತಃಕರಣ ಅರ್ಥ ಮಾಡಿಕೊಂಡು ಅವರಿಗೆ ತೊಂದರೆ ಕೊಡಲಿಲ್ಲ.

ಆಡಿಕೊಳ್ಳುವವರ ಬಗ್ಗೆ ತಲೆಕೆಡಿಸಿಕೊಳ್ಳಲು ಹೋಗದ ಕಾಮೇಗೌಡರು ಜೆಸಿಬಿಯನ್ನು ಕರೆಸಿ ಕಟ್ಟೆ ಕಾರ್ಯ ಮುಂದುವರಿಸಿದರು. ಅದಕ್ಕಾಗಿ 20ಕ್ಕೂ ಹೆಚ್ಚು ಕುರಿಗಳನ್ನು ಮಾರಾಟ ಮಾಡಿದ್ದರು. ಕೆಲವೇ ದಿನಗಳಲ್ಲಿ ಕಟ್ಟೆ ನಿರ್ಮಾಣಗೊಂಡಿತು. ದೇವರಿಗೆ ಮಾತು ಕೊಟ್ಟಂತೆ ‘ಕಾಮೇಗೌಡ ಸೇವಕ’ ಎಂದು ಹೊಸ ಕಟ್ಟೆಗೆ ನಾಮಕರಣ ಮಾಡಿದರು. ಅದರ ಸುತ್ತಲೂ ದೊಡ್ಡ ಹಾಗೂ ಸಣ್ಣ ಗಾತ್ರದ ಎರಡು ಏರಿಗಳನ್ನು ನಿರ್ಮಿಸಿ, ಅವುಗಳನ್ನು ‘ರಾಮ’, ‘ಕೃಷ್ಣ’ ಎಂದು ಕರೆದರು.

## ಹೆರಿಗೆ ಹಣ ಉಳಿತಾಯದ ‘ಕೃಷ್ಣ’

ಸೊಸೆ ತುಂಬು ಗರ್ಭಿಣಿ, ತನ್ನ ಖರ್ಚಿನಲ್ಲೇ ಹೆರಿಗೆಯಾಗಬೇಕು ಎಂದು ನಿರ್ಧರಿಸಿ ಕಾಮೇಗೌಡರು ಹಣ ಹೊಂದಿಸಿಕೊಂಡಿದ್ದರು. ಕನಕಪುರ ಸರ್ಕಾರಿ ಆಸ್ಪತ್ರೆಯಲ್ಲಿ ಗಂಡು ಮಗುವಿನ ಜನನವಾಯಿತು. ಸಹಜ ಹೆರಿಗೆಯಾದ ಕಾರಣ ಒಂದು ರೂಪಾಯಿಯೂ ಖರ್ಚಾಗಲಿಲ್ಲ. ಕೂಡಿಟ್ಟಿದ್ದ ಹಣ ಉಳಿತಾಯವಾಯಿತು. ಆ ಹಣದಿಂದ ಬೆಟ್ಟದ ಮಧ್ಯಭಾಗದಲ್ಲಿ ಒಂದು ಕಟ್ಟೆ ನಿರ್ಮಿಸಲು ನಿರ್ಧರಿಸಿದರು.

ಈಗಾಗಲೇ ಬೆಟ್ಟದ ತಪ್ಪಲಲ್ಲಿ ಮೂರು ಕಟ್ಟೆಗಳಿದ್ದವು. ಬೆಟ್ಟದ ಕೊಂಚ ಮೇಲ್ಭಾಗಕ್ಕೆ ತೆರಳಿ ನೀರಿನ ಪಸೆ ಇರುವ ಜಾಗ ಹುಡುಕಿದರು. ಅಲ್ಲಿಗೆ ತೆರಳುವ ದಾರಿಯನ್ನು ಸುಣ್ಣದಿಂದ ಗುರುತು ಮಾಡಿಕೊಂಡರು. ಆದರೆ ಅಲ್ಲಿಗೆ ಜೆಸಿಬಿ ತೆರಳಲು ದಾರಿ ಇರಲಿಲ್ಲ. ದಾರಿ ನಿರ್ಮಿಸಿಕೊಳ್ಳಲು ಹೆಚ್ಚಿನ ಹಣ ಖರ್ಚು ಮಾಡಬೇಕಾಯಿತು. ಈಗಾಗಲೇ ಇದ್ದ ಮೂರು ಕಟ್ಟೆಗಿಂತಲೂ ಇದು ಕೊಂಚ ದೊಡ್ಡದಾಗಿತ್ತು. ಆದರೆ ದೊಡ್ಡ ಬಂಡೆ ಎದುರಾದ ಕಾರಣ ಜೆಸಿಬಿ ಚಾಲಕ ಕೆಲಸ ಮಾಡಲು ನಿರಾಕರಿಸಿದ. ಆತನ ಜೊತೆ ಜಗಳಕ್ಕಿಳಿಯುತ್ತಿದ್ದ ಕಾಮೇಗೌಡರು ತಾನು ಹೇಳಿದಂತೆ ಕೆಲಸ ಮಾಡುವಂತೆ ಪೀಡಿಸುತ್ತಿದ್ದರು.

ಕೊನೆಗೂ ಕಟ್ಟೆ ನಿರ್ಮಾಣವಾಯಿತು. 10 ಅಡಿಗಿಳಿಯುತ್ತಿದ್ದಂತೆ ನೀರು ತುಂಬಿಕೊಂಡಿತ್ತು. ಮೊಮ್ಮಗ ಕೃಷ್ಣನ ಹೆರಿಗೆ ಹಣದಿಂದ ಆ ಕಟ್ಟೆ ಕಟ್ಟಿದ ಕಾರಣ ಅದಕ್ಕೆ ‘ಕೃಷ್ಣ’ ಎಂದೇ ಹೆಸರಿಟ್ಟರು.

## ಪೂರ್ವಿ-ಪೂಜಾ ಯುಗಳ

ಕುಂದನಿ ಬೆಟ್ಟದ ಮೇಲೆ ನಾಲ್ಕು ಕಟ್ಟೆಗಳು ನಳನಳಿಸುತ್ತಿದ್ದವು. ಪ್ರಾಣಿ, ಪಕ್ಷಿಗಳು ನೀರು ಕುಡಿದು ಸಂಭ್ರಮಿಸುತ್ತಿದ್ದವು. ಬೆಟ್ಟದ ಕೆಳಭಾಗದಲ್ಲಿದ್ದ ಜಮೀನುಗಳಲ್ಲಿ ಹಸಿರು ಕಂಗೊಳಿಸುತ್ತಿತ್ತು. ನಾಲ್ಕು ಕಟ್ಟೆಗಳನ್ನು ನಿರ್ವಹಿಸುವುದು ಅವರಿಗೆ ಸವಾಲಾಗಿತ್ತು. ಪ್ರತಿ ವರ್ಷ ಹೂಳು ತೆಗೆಸಿ, ಕಟ್ಟಡವನ್ನು ಗಟ್ಟಿಗೊಳಿಸುತ್ತಿದ್ದರು.

ಕಾಮೇಗೌಡರು, ತಮ್ಮ ಮೊಮ್ಮಕ್ಕಳನ್ನು ಬೆಟ್ಟದ ಮೇಲೆ ಕರೆದೊಯ್ದು ಕಟ್ಟೆ ತೋರಿಸುತ್ತಿದ್ದರು. ಮಕ್ಕಳು ಅಲ್ಲಿ ಆಟವಾಡುತ್ತಿದ್ದವು. ‘ಇದು ನನ್ನ ಕಟ್ಟೆ’ ಎಂದು ಮೊಮ್ಮಗ ಕೃಷ್ಣ ಸದಾ ಹೇಳುತ್ತಿದ್ದ.